**<u>ದಿಃ 03-04-2019 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟೀ ಸವಾಲುಃ2 ನೇ ಎದುರುದಾರರ ಪರಃ ಶ್ರೀ ಪಿ ಎನ್ ವಕೀಲರಿಂದಃ</u>**

ಟ್ರಾಕ್ಟರ ಮಾಲೀಕರ ಹೆಸರು ಗಂಗಮ್ಮ. ಅವರ ಶಿವಮೊಗ್ಗದವರು. ನನ್ನ ಊರು ನೇರಳಕಟ್ಟೆ. ನೇರಳಕಟ್ಟೆಯಿಂದ ಶಿವಮೊಗ್ಗ ಎಷ್ಟು ದೂರ ಆಗುತ್ತದೆ ಎಂದರೆ ಗೊತ್ತಿಲ್ಲ. ಗಂಗಮ್ಮ ನಮ್ಮ ಊರಲ್ಲಿ ವಾಸ ಇದ್ದರು. ಟ್ರಾಕ್ಟರ ನ್ನು ತಂದು ನಮ್ಮ ಊರಲ್ಲಿ ವಾಸ ಮಾಡುತ್ತಿದ್ದರು. ಅವರು ಏನು ಕೆಲಸ ಮಾಡುತ್ತಿದ್ದರು ಅಂತ ಗೊತ್ತಿಲ್ಲ. ಮನೆ ಬಾಡಿಗೆ ಮಾಡಿದ್ದರು. ಯಾರ ಮನೆ ಬಾಡಿಗೆ ಮಾಡಿದ್ದರು ಅಂತ ಗೊತ್ತಿಲ್ಲ. ನಮ್ಮ ಊರಲ್ಲಿ ನೂರರ ಮೇಲೆ ಮನೆಗಳು ಇವೆ. ಸಣ್ಣ ಹಳ್ಳಿ ಎಂದರೆ ಸರಿ. ಎಷ್ಟು ಮನಗಳೆ ಇವೆ ಅಂತ ಗೊತ್ತಾಗುವುದಿಲ್ಲ. ನನ್ನ ಯಜಮಾನರು ಗಂಗಮ್ಮನ ಹತ್ತಿರ ಕೆಲಸ ಮಾಡುತ್ತಿದ್ದರು. ಗಂಗಮ್ಮ ಇವರನ್ನು ನಾನು ನೋೀಡಿಲ್ಲ ಅವರಿಗೆ ಎಷ್ಟು ವರ್ಷ ಅಂತ ಗೊತ್ತಿಲ್ಲ. ಗಂಗಮ್ಮ ಯಾವತ್ತೂ ನನ್ನ ಗಂಡನಿಗೆ ಕೆಲಸಕ್ಕೆ ಇಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. ಗಂಗಮ್ಮ ನಮ್ಮ ಊರಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

2. ಹಿಂದೆ ಇದೆ ನ್ಯಾಯಾಲಯದಲ್ಲಿ ಎಂ ವಿ ಸಿ ಅರ್ಜಿ ಹಾಕಿದ್ದೆ ಎಂದರೆ ಸರಿ . ಅದರಲ್ಲಿ ಪರಿಹಾರ ಸಿಗಲಿಲ್ಲ ಅಂತ ವಜಾ ಮಾಡಿಸಿಕೊಂಡಿರುತ್ತೇನೆ. ನನ್ನ ಯಜಮಾನರು ಟ್ರಾಕ್ಟರ ಮೆಡಗಾಡ್ ಮೇಲೆ ಕುಳಿತು ಸತ್ತಿದ್ದಾರೆ ಎಂದರೆ ಸರಿ . ಟ್ರೆಲರ ಇರುವ ಬಗ್ಗೆ ಗೊತ್ತಿಲ್ಲ. ನನ ಯಜಮಾನರಿಗೆ ಟ್ರಾಕ್ಟರ ನಲ್ಲಿ ಕೆಲಸಕ್ಕೆ ಹೋದಾಗ 5000 ರೂ. ಸಂಬಳ 200 ಭತ್ತ ಕೊಡುತ್ತಿದ್ದರು ಅಂತ ದಾಖಲೆ ಹಾಜರುಪಡಿಸಿಲ್ಲ. ಭತ್ತೆ ಕೊಡುತ್ತಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿರುತ್ತಾರೆ. ಪೊಲೀಸರ ಮುಂದೆ ಗಂಗಮ್್ಮನ ಕೈಕೆಳಗೆ ಕೆಲಸ ಮಾಡುತ್ತಿದ್ದರು ಅಂತ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಶವ ಸಂಸ್ಕಾರಕ್ಕೆ ಹಾಗೂ ಕಾರು ಬಾಡಿಗೆಗೆ ಸೇರಿ 1,05,000 ರೂ. ಖರ್ಚು ಮಾಡಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಮೆಡಗಾಡ ಮೇಲೆ ಕುಳಿತ್ತು ಬಿದ್ದು ತೀರಿಕೊಂಡಿರುವುದರಿಂದ ವಿಮೆ ಕಂಪನಿಯವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರನಲ್ಲಿ ಚಾಲಕನಿಗೆ ಮಾತ್ರ ಕುಳಿತುಕೊಳ್ಳುವ ಅವಕಾಶ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಗಾಡಿ ರಿಪೇರಿ ಇದೆ ಅಂತ ಚಾಲಕ ನನ್ನ ಗಂಡನನ್ನು ಕರೆದುಕೊಂಡು ಹೋಗಿದ್ದರು ಅನ್ನುತ್ತಾರೆ. ಕಾರ್ಮಿಕ ಮತ್ತು ಮಾಲೀಕರ ಸಂಬಂಧ ಇರದೆ ಇರುವ ಕಾರಣ ವಿಮೆ ಕಂಪನಿಯವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ